ಬೆಳಗಾದರೆ ಅವನ ಹುಟ್ಟುಹಬ್ಬ. ಯಾವುದೇ ಊರಿನಲ್ಲಿರಲಿ, ಫೋನ್ ಮಾಡಲಿ ಬಿಡಲಿ ಯಥಾಪ್ರಕಾರದಂತೆ ಬಂದೇ ಬರುತ್ತಾನೆ ಎಂದು ಬಾಲಾಜಿಯ ತಾಯಿ ಸರಸೂಗೆ ಭರವಸೆ. ಅವನಿಗೆಷ್ಟು ವರ್ಷ ಆಯಿತು? ಲೆಕ್ಕ ಹಾಕುವ ಅವಶ್ಯಕತೆಯಿಲ್ಲ. ಅವಶ್ಯಕತೆ ಇದ್ದದ್ದು ಅವನಂದುಕೊಂಡಷ್ಟು ಕಾಸು ಕೊಡುವ, ಇಷ್ಟವಾಗುವ ಕೆಲಸ; ಒಂದು ಕಡೆ ಕಟ್ಟಿ ಹಾಕಿ ಎಲ್ಲ ಇಷ್ಟಗಳನ್ನು ಪೂರೈಸಿ ತೆಪ್ಪಗಾಗಿಸುವ ಹೆಂಡತಿ. ಈ ಎರಡೂ ವಿಷಯಗಳಿಗೆ ಸರಸೂ ಕೈಲಾಗುತ್ತಿದ್ದದ್ದು ನಿಟ್ಟುಸಿರು ಬಿಡುವುದಷ್ಟೆ. ಬೇರೆಯವರಿರಲಿ ಅವನ ತಳಬುಡ ತನಗೇ ತಿಳಿದಿಲ್ಲದ ತಿರುಗಣೆಯಲ್ಲಿ ಅವಳು. ಹುಡುಗಿ ಸಿಗೋದೂ, ಮದುವೆ ಆಗೋದೂ ನೋಡಿದರಾಯಿತು, ಇಲ್ಲೇ ಯಾವುದಾದರೂ ಕೆಲಸ ಮಾಡಿಕೊಂಡಿದ್ದರೆ ತನಗೂ ಜೊತೆ ಇರುತ್ತದೆ, ಅವನನ್ನು ನೋಡಿಕೊಳ್ಳುವುದೂ ಆಗುತ್ತದೆ ಎನ್ನುವ ಅವಳ ಮಾತಿಗೆ, ಅವನಿಂದ ಉತ್ತರ ಸೊನ್ನೆ. ಅವನ ಲಕ್ಷ್ಯವೆಲ್ಲ ಬೇರೆಲ್ಲೋ... ಹೇಳಿ ನಾಲಗೆಯೊಣಗಿ ಬೇರೆ ದಾರಿಯಿಲ್ಲದೆ ತಂಗಿಯ ಕೊನೆ ಮಗ ನಾಗೇಂದ್ರನನ್ನು ಡಿಗ್ರಿ ಓದಲು ತಮ್ಮೂರಲ್ಲೆ ಕಾಲೇಜಿಗೆ ಸೇರಿಸಿದ್ದರಿಂದ ಮನೆಯಲ್ಲಿ ಮಾತನಾಡಲು ಜೀವವೊಂದು ಒದಗಿತ್ತು. ಚಟುವಟಿಕೆಯ ಹುಡುಗ. ಸರಸೂಗೆ ಹೊಂದಿಕೊಂಡಿದ್ದ. ಬಾಲಾಜಿಯ ರೂಮನ್ನು ಅವನಿಗೆ ಬಿಟ್ಟುಕೊಟ್ಟಾಗ ನಾಗೇಂದ್ರನ ಕಣ್ಣಿಗೆ ಹಬ್ಬ. ಅಲ್ಲಿದ್ದ ಬೀರು, ಅಟ್ಟವನ್ನು ಶುಚಿಗೊಳಿಸಿದ್ದ. ಅಟ್ಟದಲ್ಲಿ ಕಂಡ ಸೂಟ್‌ಕೇಸನ್ನು ಅಲ್ಲೊಂದು ಕಡೆ ಒರಗಿಸಿಟ್ಟಿದ್ದ. ಅವನಿಗೆ ಕಾಲೇಜಿನ ಬ್ಯಾಡ್ಮಿಂಟನ್ ಟೀಂನಲ್ಲಿ ಪ್ರವೇಶ ದೊರಕಿದಾಗ ತಾನು ಕಾಲೇಜಿನಲ್ಲಿದ್ದಾಗ ಖೋ ಖೋ ಟೀಂನಲ್ಲಿದ್ದದ್ದನ್ನು ನೆನಪಿಕೊಂಡಳು. ಆಟದಲ್ಲಿನ ಅವನಿಗಿದ್ದ ಆಸಕ್ತಿ ಅವಳಿಗೆ ಮೆಚ್ಚು. ಆರೋಗ್ಯವಷ್ಟೇ ಅಲ್ಲದೆ ಇಡೀ ಮೈಯಿಗೆ ಇತರ ಅಗತ್ಯಗಳನ್ನು ಪೂರೈಸುವುದರ ಜೊತೆ ಅದರಿಂದ ಗೆಲುವಿಗೆ ಕುಮ್ಮಕ್ಕು ಎಂದವಳ ಅಭಿಪ್ರಾಯ; ಅಭಿಮಾನ. ಆಟದ ಬಗ್ಗೆ ಆಗೀಗ ವಿಚಾರಿಸಿಕೊಳ್ಳುತ್ತಿದ್ದಳು. ಹೇಗೋ ಬಿಡುವು ಮಾಡಿಕೊಂಡು ಒಮ್ಮೆ ಅವರಾಡುವ ಸಮಯದಲ್ಲಿ ಹೋಗಿ ನೋಡಿಕೊಂಡು ಬಂದಿದ್ದಳು. ಜೊತೆಗೆ ಆ ದಿನ ಅವಳು ಮಾಡಿಕೊಂಡು ಹೋಗಿ ಹಂಚಿದ್ದ ಚೌಚೌ ಬಾತ್ ಎಲ್ಲರಿಗೂ ಖುಷಿಕೊಟ್ಟಿತ್ತು. ಆದರೆ ಸ್ಕೂಲು ಕಾಲೇಜಿನಲ್ಲಿದ್ದಾಗ ಬಾಲಾಜಿ ಇವೆಲ್ಲದರಿಂದ ದೂರ. ಕೆಲವು ಸಲ ಹೇಳಿ ನೋಡಿದರೂ ಉಪಯೋಗವಾಗದೆ ಅವನಿಗಿಷ್ಟವಿಲ್ಲವೆಂದು ಸರಸೂ ಪ್ರಯತ್ನವನ್ನು ಕೈಬಿಟ್ಟಿದ್ದಳು. ಸಾಲದ್ದಕ್ಕೆ ಅವನಿಷ್ಟದಂತಿರಲಿ ಬಿಡು ಎಂದು ಗಂಡ ರಾಮಚಂದ್ರನ ತಾಕೀತು ಬೇರೆ. ಒಟ್ಟಾರೆಯಾಗಿ ಪೂರ್ಣ ಸ್ವಾತಂತ್ರ್ಯ ಸಿಕ್ಕು ಕುಣಿದಿದ್ದ ಬಾಲಾಜಿ. ಕಾಲೇಜಿನಲ್ಲಿ ಅವನ ಓದು, ಓಡಾಟ, ಗೆಳೆಯರು, ಹವ್ಯಾಸಗಳ ಬಗ್ಗೆ ಕಿಂಚಿತ್ ತಿಳಿಯದೆ ಅವಳು ಕಂಗಾಲಾದದ್ದುಂಟು. ಅವನ ಬಗ್ಗೆ ಅಂದಾಜಿದ್ದರೆ ಪ್ರಶ್ನೆಗಳಿಗೆ ಅವಕಾಶವಿತ್ತು. ಅದು ನಾಪತ್ತೆಯಾಗಿ ಎಲ್ಲ ಖಾಲಿ. ಕೇವಲ ಊಹೆಗಳಲ್ಲಿಯೇ ಅವಳ ಸವಾರಿ.